Manufacture of Neera.

Q.—21. **Sri H. C. LINGA REDDY** (Kolar District—General).—Will the Government be pleased to state:—

(*a*) whether they are arranging for the manufacture of *Neera* at Davangere, Chitaldrug District;

(*b*) whether they will introduce the same in the other Districts also;

(c) whether any technical advice was taken in the matter before taking the decision?

A.—**The Hon'ble Sri H. SIDDAIYA** (Minister for Revenue and Excise).—

(*a*) Yes. Permission has been granted to tap date trees for drawing *Neera* near Kodaganur and to sell the same at Davangere.

(*b*) A decision in this behalf will be taken in the light of experience gained in the work of the scheme at Davangere.

(c) Both the Excise Commissioner and the Inspector-General of Police were consulted before taking the decision.

Sri H. C. LINGA REDDY.—It is stated that you have taken the opinion of the Excise Commissioner and the Inspector-General of Police. Is it technical advice?

***The Hon'ble Sri H. SIDDAIYA.**—Yes. The Excise Commissioner will make a personal study of this.

Sri H. C. LINGA REDDY.—May I know whether there was any advice of a Doctor or a Chemist?

The Hon'ble Sri H. SIDDAIYA.—In addition to this, ಉತ್ತರದಲ್ಲೇನೂ ಹೇಳಿಲ್ಲ, ಶ್ರೀ ಎಂ. ರಮಾನಂದ ಎಂಬುವ ಪರಿಣತರ ಅಭಿಪ್ರಾಯವನ್ನೂ ಸಹ ಪಡೆಯಲಾಗಿದೆ.

Sri H. C. LINGA REDDY.—What was his opinion in this matter?

The Hon'ble Sri H. SIDDAIYA.—He has agreed to this.

Sri H. C. LINGA REDDY.—Are Government aware that if Neera is exposed to air, it would become toddy?

The Hon'ble Sri H. SIDDAIYA.—If exposed to air for a long time. It will not be allowed to be so exposed.

Sri H. C. LINGA REDDY.—Will it not result in converting dry Districts into wet again?

The Hon'ble Sri H. SIDDAIYA.—No.

Sri H. C. LINGA REDDY.—What income will the Government get by the introduction of Neera?

The Hon'ble Sri H. SIDDAIYA.—About 800 rupees per month.

Sri H. C. LINGA REDDY.—You have said that permission is given to tap date trees. To whom have you given permission?

The Hon'ble Sri H. SIDDAIYA.—To one Sri Channabasappa.

Sri S. RANGARAMIAH (Mysore District—General).—What is the total quantity of Neera produced every day?

The Hon'ble Sri H. SIDDAIYA.—About 450 lbs a day.

Sri S. RANGARAMIAH.—Is all that quantity used for drinking purposes or for any other purpose also?

The Hon'ble Sri H. SIDDAIYA.—Neera is to be sold for drinking purposes at Davangere.

Sri S. RANGARAMIAH.—Are you not manufacturing jaggery out of it?

The Hon'ble Sri H. SIDDAIYA.—Yes, jaggery is also being manufactured. But Neera will be supplied separately for the purpose of manufacturing jaggery.

Sri S. RANGARAMIAH:—What is the quantity of Neera required for producing jaggery?

The Hon'ble Sri H. SIDDAIYA.—We have allowed 600 trees to be tapped, 300 for this purpose and 300 for the manufacture of jaggery.

Sri S. RANGARAMAIAH.—Are you conducting this operation on a profitable basis or with loss?

The Hon'ble Sri H. SIDDAIYA.—We have started this just a month back. It is only experimental. The result will have to be awaited and seen. Within two months the results will be known.

Sri S. RANGARAMAIAH.—Is it not a fact that none of the drinking public is very much interested in making Neera?

The Hon'ble Sri H. SIDDAIYA.—We have no definite information so far.

ಶ್ರೀ ಎಚ್. ಸಿದ್ದವೀರಪ್ಪನವರು— (ಚಿತ್ರದುರ್ಗ ಜಿಲ್ಲೆ)—ನಮ್ಮ ಸಂಸ್ಥಾನದಲ್ಲಿ ಈಗ ಮಾಡಿರುವ ನೀರ ಯೋಜನೆಯು ಮದ್ರಾಸು ಮತ್ತು ಬೊಂಬಾಯಿಗಳಲ್ಲಿ ಈಗಾಗಲೇ ಜಾರಿಯಲ್ಲಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ಬಂದಿದೆ.

ಶ್ರೀ ಎಚ್. ಸಿದ್ದವೀರಪ್ಪನವರು.—ಅಲ್ಲಿ ನುಮಾರು ಎರಡು ಮೂರು ವರ್ಷಗಳಿಂದ ಅದು ಜಾರಿಯಲ್ಲದೆ ಯೆಂಬುದು ಗೊತ್ತೆ ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ಖಚಿತವಾದ ಕಾಲ ಗೊತ್ತಿಲ್ಲ, ಅಂತೂ ಇದೆ.

Sri M. GOVINDA REDDY (Chitaldrug District—General).—Is Neera sold at Davangere in Government Depots?

The Hon'ble Sri H. SIDDAIYA.—The contractor is allowed to have his shops. In two centres he is selling it.

ಶ್ರೀ ಎಸ್. ರಂಗರಾಮಯ್ಯನವರು (ಮೈಸೂರು ಜಿಲ್ಲೆ).—ನೀರಾ ಲೋಟಾದಲ್ಲಿ ಅಳತೆ ಮಾಡಿಕೊಡು ತ್ತಾರೋ ಅಥವಾ ಗ್ಯಾಲ್ ಪ್ರಕಾರ ಕೊಡುತ್ತಾರೊ ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ಒಂದು ಲೋಟಾಕ್ಕೆ ಎರಡಾಣೆಯಂತೆ ಕೊಡುತ್ತಿದ್ದಾರೆ.

ಶ್ರೀ ಎಸ್. ರಂಗರಾಮಯ್ಯನವರು.—ಕಂಟ್ರಾಕ್ಟ್ ರಿಗೆ ಲಾಭ ಎಷ್ಟು ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ಅದನ್ನು ಹೇಳುವದು ಬಹಳ ಕಷ್ಟ. ನುಮಾರು 500 ರೂಪಾ ಯಿಗಳು ಬರಬಹುದೆಂದು ಅಂದಾಜು ಮಾಡಲಾಗಿದೆ.

Sri D. H. CHANDRASEKHARAIYA (Chitaldrug District—General).—Have the Government ascertained as to how many hours after sun-rise Neera will take to ferment?

The Hon'ble Sri H. SIDDAIYA.—About 12 to 24 hours.

Sri D. H. CHANDRASEKHARAIYA.—Is it the expert opinion which Government have taken or is it their own experience on the basis of which this information is furnished?

The Hon'ble Sri H. SIDDAIYA.—Information is got from the concerned officers and also from persons who are dealing with this.

Sri D. H. CHANDRASEKHARAIYA.—May I take it that Neera is sold up till 10 to 12 hours after sun-rise?

The Hon'ble Sri H. SIDDAIYA.—It is so arranged that it should be disposed of before early morning.

Sri D. H. CHANDRASEKHARAIYA.—So may I take it that Neera is now being sold before sun-rise?

The Hon'ble Sri H. SIDDAIYA.—Not necessarily before sun-rise.

Sri D. H. CHANDRASEKHARAIYA.—That is why I ask whether Neera is sold for 10 to 12 hours after sun-rise?

The Hon'ble Sri H. SIDDAIYA.—No.

Sri D. H. CHANDRASEKHARAIYA.—I should like to know up to what hour Neera is being sold after sun-rise?

The Hon'ble Sri H. SIDDAIYA.—It will be closed before 9 a.m. I think, subject to correction.

Sri H. SIDDAVEERAPPA.—8-30 a.m.

Sri D. H. CHANDRASEKHARAIYA.—Is it not necessary to issue definite rules as to the duration of time during which it should be sold and many other matters concering this?

The Hon'ble Sri H. SIDDAIYA.—Yes. That is absolutely necessary. I now understand that it will be closed by 8-30 a.m.

ಶ್ರೀ ಕೆ. ಎಚ್. ಮುದಿಯಪ್ಪನವರು (ಚಿಕ್ಕಮಗಳೂರು ಜಿಲ್ಲೆ).—ಇದನ್ನು ಇತರರಿಗೆ ಕೊಡವುದಕ್ಕೆ ಮುಂಚೆ ಯಾರಾದರೂ ಉಪಯೋಗಿಸಿದ್ದಾರೆಯೆ ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ಕೆಲವರು ಉಪಯೋಗ ಮಾಡಿದ್ದಾರೆ.

ಶ್ರೀ ಕೆ. ಎಚ್. ಮುದಿಯಪ್ಪನವರು.—ನೀರಾ ಕೆಲವು ಗಂಟೆಗಳ ನಂತರ ಹೆಂಡವಾಗುತ್ತದೆಯೆಂಬುದು ಸರ್ಕಾರದ ಗಮನಕ್ಕೆ ಬಂದಿದೆಯೆ ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ಬಂದಿದೆ. ಆದರೆ ಅದಕ್ಕೆ ಅವಕಾಶವಿಲ್ಲ.

ಶ್ರೀ ಕೆ. ಎಚ್. ಮುದಿಯಪ್ಪನವರು.—ನೀರಾ ತಯಾರಿಸುವುದಕ್ಕೆ ಮುಂಚೆ ಸಾರ್ವಜನಿಕರ ಅಭಿಪ್ರಾಯ ವನ್ನು ತೆಗೆದುಕೊಂಡು ಆ ಮೇರೆ ಜಾರಿಗೆ ಕೊಟ್ಟಿರಾ ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ಬೊಂಬಾಯಿ ಮತ್ತು ಮದ್ರಾಸು ಸರ್ಕಾರಗಳವರು ಇದನ್ನು ಕೂಲಂ ಕಷವಾಗಿ ಪರಿಶೀಲಿಸಿ ಜಾರಿಗೆ ಕೊಟ್ಟಿದ್ದಾರೆ ಮತ್ತು ಇಂಡಿಯಾ ಸರ್ಕಾರದವರೂ ಸಹ ಇದಕ್ಕೆ ಬೆಂಬಲ ನೀಡಿದ್ದಾರೆ.

ಶ್ರೀ ಕೆ. ಎಚ್. ಮುದಿಯಪ್ಪನವರು.—ನೀರಾ ತಯಾರಿಸಲು ಅವಕಾಶ ಕೊಡುವಾಗ ನೇಂದಿ ಮರದಲ್ಲಿ ನೀರಾ ಮಾತ್ರ ತೆಗೆದು ಉಪಯೋಗಿಸುತ್ತಾರೆಂಬು ದನ್ನು ತಿಳಿಯಲು ವಿಶೇಷ ಸಿಬ್ಬಂದಿಯೇನಾದರೂ ಇಟ್ಟಿ ದ್ದೀರಾ ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ಇಟ್ಟಿದೆ.

ಶ್ರೀ ಕೆ. ಎಚ್. ಮುದಿಯಪ್ಪನವರು.—ನೀರಾ ಮಾತ್ರ ತೆಗೆದು ಉಪಯೋಗ ಮಾಡುತ್ತಿದ್ದಾರೆ ಎಂದು ಯಾರಾದರೂ ಸರ್ಟಿಫೈ ಮಾಡುತ್ತಿದ್ದಾರೆಯೆ ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ಅದಕ್ಕೆ ಸಿಬ್ಬಂದಿ ಇದೆ.

ಶ್ರೀ ಕೆ. ಎಚ್. ಮುದಿಯಪ್ಪನವರು.—ನೀರಾ ತೆಗೆಯುವ ನೆಪದಲ್ಲಿ ಹೆಂಡ ತೆಗೆದು ಚಿತ್ರದುರ್ಗ ಮುಂತಾದ ಕಡೆಗಳಿಗೆ ಸಾಗಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ಇಲ್ಲ.

ಶ್ರೀ ಕೆ. ಎಚ್. ಮುದಿಯಪ್ಪನವರು.—ಹಾಗೆ ಮಾಡು ತ್ತಿರುವುದು ಗಮನಕ್ಕೆ ಬಂದರೆ ನೀರಾ ತಯಾರಿಸು ವುದು ನ್ಯಾಯವಲ್ಲ ಎಂದು ಒಪ್ಪುತ್ತೀರಾ ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ಇಲ್ಲಿಯ ವರೆಗೆ ಅಂಥ ಸಂದರ್ಭಗಳು ಗಮನಕ್ಕೆ ಬಂದಿಲ್ಲ. ಊಹೆ

ಮಾಡಿ ಹೇಳುವುದು ಸರಿಯಲ್ಲ. ಆ ರೀತಿ ನಡೆಯುವುದು ಕಂಡು ಬಂದರೆ ಅದನ್ನು ನಿರ್ಬಂಧಪಡಿಸುತ್ತೇವೆ.

ಶ್ರೀ ಎಂ. ಮಾದಯ್ಯನವರು (ಮೈಸೂರು ಜಿಲ್ಲೆ—ನಿಮ್ನ ಪಂಗಡ).—ನೀರಾ ಮಾದಕ ಪದಾರ್ಥಗಳ ಲಿಸ್ಟಿನಲ್ಲಿ ಸೇರಿದೆಯೆ ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ಇಲ್ಲ.

ಶ್ರೀ ಎಂ. ಮಾದಯ್ಯನವರು.—8½ ಗಂಟೆಯೊಳಗೆ ಅದನ್ನು ಮಾರಬೇಕೆಂದು ಹೇಳಿದಿರಿ. ಅದು ತಪ್ಪಿದರೆ ಹೊತ್ತಾದ ಮೇಲೆ ಹೆಂಡವಾಗುತ್ತದೆಯಲ್ಲವೆ ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ಅಲ್ಲಿಯವರೆಗೆ ನಿಲ್ಲುವುದಿಲ್ಲ. ತಯಾರಾಗುವುದೆಲ್ಲಾ ಖರ್ಚಾಗಿ ಹೋಗುತ್ತದೆ.

ಶ್ರೀ ಎಂ. ಮಾದಯ್ಯನವರು.—ಅದನ್ನು ಕುಡಿಯದೆ ಹೆಂಡವಾದ ಮೇಲೆ ಬೇರೆ ಕಡೆಗೆ ತೆಗೆದುಕೊಂಡು ಹೋಗಬಹುದಲ್ಲವೆ ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ಬೇರೆ ಕಡೆಗೆ ತೆಗೆದುಕೊಂಡು ಹೋಗಕೂಡದು, ಆ ಸ್ಥಳದಲ್ಲೇ ಉಪಯೋಗಿಸಬೇಕು ಎಂದು ನಿರ್ಬಂಧಮಾಡಿದೆ.

ಶ್ರೀ ಎಂ. ಮಾದಯ್ಯನವರು.—ಉಪಯೋಗವಾಗದೆ ಉಳಿದು ಹೆಂಡವಾದರೆ ಆ ಲಕ್ಷಣ ಕಂಡ ಕೂಡಲೆ ಮಾರ ಕೂಡದೆಂದು ಪರೀಕ್ಷೆಮಾಡಿ ಅಡ್ಡಿಪಡಿಸಲು ಸಿಬ್ಬಂದಿಯಿದೆಯೇ ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ಇದೆ.

ಶ್ರೀ ಬಿ. ಎಂ. ಶ್ಯಾಮಣ್ಣಗೌಡರು (ಬೆಂಗಳೂರು ಸಿವಿಲ್ ಪ್ರದೇಶ).—ನೀರಾ ತಯಾರಿಸಲು ಈಗ ಪ್ರಾರಂಭಿಸಿದ್ದೀರಿ. ಆದರಿಂದ ಪ್ರಯೋಜನವೇನು ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ರಕ್ತಶುದ್ಧಿ ಮತ್ತು ರಕ್ತವೃದ್ಧಿ.

ಶ್ರೀ ಬಿ. ಎಂ. ಶ್ಯಾಮಣ್ಣಗೌಡರು.—ವೈದ್ಯರ ಸಲಹೆಯನ್ನು ಪಡೆದಿದ್ದೀರಾ ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ಪಡೆದಿದೆ.

ಶ್ರೀ ಬಿ. ಎಂ. ಶಾಮಣ್ಣಗೌಡರು.—ಅವರೇನು ಹೇಳಿದ್ದಾರೆ ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ನಾನು ಹೇಳಿರುವುದನ್ನೇ ಹೇಳಿದ್ದಾರೆ.

ಶ್ರೀ ಬಿ. ಎಂ ಶ್ಯಾಮಣ್ಣಗೌಡರು.—ಒಂದುಕಡೆ ಅಮಲು ಪದಾರ್ಥ ಸೇವನೆ ಮಾಡಕೂಡದೆಂದು ಒಂದೊಂದು ಜಿಲ್ಲೆಯಲ್ಲಿ ತಪ್ಪಿಸುತ್ತಿರುವಾಗ ಈ ರೀತಿ ಮಾಡುವುದು ಸರಿಯೆ ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ಇದು ಅಮಲು ಪದಾರ್ಥವಲ್ಲ.

ಶ್ರೀ ಬಿ. ಎಂ. ಶ್ಯಾಮಣ್ಣಗೌಡರು.—ಇದರಿಂದ ಕಾಳನಂತೆಗೆ ಅವಕಾಶವಾಗುವುದಿಲ್ಲವೆ ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ಅದಕ್ಕೆ ಅವಕಾಶ ಕೊಡುವುದಿಲ್ಲ.

ಶ್ರೀ ಬಿ. ಹುಚ್ಚೇಗೌಡರು (ತುಮಕೂರು ಜಿಲ್ಲೆ).—ಇದನ್ನು ಹಂಚುವವರು ಯಾರು ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ಕಂಟ್ರಾಕ್ಟರು.

ಶ್ರೀ ಬಿ. ಹುಚ್ಚೇಗೌಡರು.—ಸರ್ಕಾರದವರು ಯಾವ ಖರ್ಚು ವೆಚ್ಚವನ್ನೂ ಮಾಡುವುದಿಲ್ಲವೇ ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ಸರ್ಕಾರಕ್ಕೆ ಖರ್ಚಿಲ್ಲ.

ಶ್ರೀ ಬಿ. ಹುಚ್ಚೇಗೌಡರು.—ಮಾರಾಟಮಾಡುವ ಅಂಗಡಿ ಹರಾಜಾಗಿದೆಯೇ ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ಇದೇ ಮೊದಲನೆಯ ಸಲ, ಯಾರೂ ಬಂದಿಲ್ಲದ್ದರಿಂದ ಕೆಲವರಿಗೆ ಕೊಟ್ಟಿದೆ.

ಶ್ರೀ ಬಿ. ಹುಚ್ಚೇಗೌಡರು.—ಹಾಗಾದರೆ ಅಡ್ವರ್ಟೈಸ್ ಮಾಡಿದ್ದೀರಾ ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ಈಗ ಪರೀಕ್ಷಾರ್ಥವಾಗಿ ಎರಡು ತಿಂಗಳಿಗೆ ಕೊಟ್ಟಿದೆ. ಮುಂದೆ ಯೋಚನೆ ಮಾಡಬೇಕು.

ಶ್ರೀ ಬಿ. ಹುಚ್ಚೇಗೌಡರು.—ಯಾರೂ ಬಂದಿಲ್ಲವೆಂದು ಹೇಳಿದಿರಿ. ಅಪ್ಲಿಕೇಷನ್ ಯಾರಿಗೆ ಹಾಕಿಕೊಳ್ಳಬೇಕಾಗಿತ್ತು ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ಸ್ಥಳಕ್ಕೆ ದೊಡ್ಡ ದೊಡ್ಡ ಅಧಿಕಾರಿಗಳು ಹೋಗಿ ಪರಿಶೀಲನೆ ನಡೆಸಿ ಯಾರಿಗೆ ಕೊಡುವುದು ಸೂಕ್ತವೆಂದು ಕಂಡು ಬಂತೋ ಅವರಿಗೆ ಕೊಟ್ಟಿದ್ದಾರೆ.

ಶ್ರೀ ಬಿ. ಹುಚ್ಚೇಗೌಡರು.—ಎಷ್ಟುಕಾಲ ಹೀಗೆ ಮಾಡಬೇಕೆಂದು ಅಭಿಪ್ರಾಯವಿದೆ ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ಎರಡು ತಿಂಗಳು, ಮಳೆಗಾಲ ಬರುವವರೆಗೆ ಪರೀಕ್ಷಾರ್ಥವಾಗಿ ಮಾಡೋಣವೆಂದಿದೆ.

ಶ್ರೀ ಬಿ. ಹುಚ್ಚೇಗೌಡರು.—ಮಾರಾಟಕ್ಕೆ ಏನು ಕಂದಾಯ ಹಾಕಿದೆ ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ಒಂದು ರೋಟ್ಲಾಕ್ಕೆ ನಮಗೆ $1\frac{1}{4}$ ಆಣೆ ಕೊಡಬೇಕು. ಎರಡಾಣೆಯಂತೆ ಮಾರಬಹುದು. ಖರ್ಚೆಲ್ಲಾ ಅವರದೇ.

ಶ್ರೀ ಬಿ. ಹುಚ್ಚೇಗೌಡರು.—ಟ್ಯಾಪ್ ಮಾಡುವವರು ಯಾರು ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ಅವರೇ.

ಶ್ರೀ ಬಿ. ಹುಚ್ಚೇಗೌಡರು.—ಅಳತೆ ಮಾಡುವವರು ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ನಮ್ಮವರು.

ಶ್ರೀ ಬಿ. ಹುಚ್ಚೇಗೌಡರು.—ಟ್ಯಾಪ್ ಮಾಡುವವರು ಅವರೇ ಆದಮೇಲೆ ಅಳತೆ ನಿಮ್ಮವರು ಹೇಗೆ ಮಾಡುವುದು ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ಇಷ್ಟು ಇದೆ ಎಂದು ಅಂಗಡಿಯಲ್ಲಿ ಮಾರುವಂತೆ ಅಳೆದುಕೊಡುತ್ತಾರೆ.

ಶ್ರೀ ಬಿ. ಹುಚ್ಚೇಗೌಡರು.—ಟ್ಯಾಪ್ ಮಾಡಿದ್ದನ್ನು ನೀವು ಅಳೆದುಕೊಡಬೇಕೋ ಅಥವಾ ಅವರೇ ಅಳೆದು ಕೊಳ್ಳುತ್ತಾರೋ ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ನಮ್ಮ ಸಿಬ್ಬಂದಿ ಅದನ್ನೆಲ್ಲಾ ನೋಡಿಕೊಳ್ಳುತ್ತಾರೆ. ಆ ವಿಚಾರದಲ್ಲಿ ಏನೂ ತೊಂದರೆಯಿಲ್ಲ.

ಶ್ರೀ ಎಚ್. ಕೆ. ವೀರಣ್ಣಗೌಡರು (ಮಂಡ್ಯ ಜಿಲ್ಲೆ).—8½ ಗಂಟೆಯೊಳಗೆ ಮಾರಾಟವಾಗುತ್ತದೆಂದು ಹೇಳುತ್ತೀರಿ. ಇನ್ನೂ ನಿಧಾನವಾಗಿ ಬೇಕಾದರೂ ಉಪಯೋಗಿಸಲು ಅನುಕೂಲಿಸುವಂತೆ ರೆಫ್ರಿಜರೇಟರಿ ನಲ್ಲಿಟ್ಟು ಕುಡಿಯುವವರಿಗೆ ಹೆಚ್ಚು ಅವಕಾಶ ಕಲ್ಪಿಸಬಹುದಲ್ಲವೆ ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ಯೋಚನೆ ಮಾಡಬೇಕು.

ಶ್ರೀ ಎಚ್. ಕೆ. ವೀರಣ್ಣಗೌಡರು.—ಹಾಗಿಟ್ಟು 10–11 ಗಂಟೆಯವರೆಗೆ ಕುಡಿಯುವುದಕ್ಕೆ ಅವಕಾಶ ಕೊಡುವುದು ಸೂಕ್ತವೆಂದು ಭಾವಿಸುತ್ತೀರಾ ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ಯೋಚನೆ ಮಾಡಲಾಗುತ್ತದೆ.

Sri M. MUNISWAMI (Kolar District—Depressed Class).—Will the Government introduce Neera into the K. G. F.?

Mr. SPEAKER.—That does not arise.

ಶ್ರೀ ಡಿ. ಗೋವಿಂದದಾಸ್‌ರವರು (ಹಾಸನ ಜಿಲ್ಲೆ).—ಅದನ್ನು ತಯಾರುಮಾಡುವಾಗ ಅದಕ್ಕೆ ಏನಾದರೂ ಹಾಕುತ್ತೀರಾ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು —ಇಲ್ಲ.

ಶ್ರೀ ಎಂ. ಸಿ. ವೆಂಕಟೇಶ್ವರವರು (ಮಂಡ್ಯ ಜಿಲ್ಲೆ.—ನಿಮ್ಮ ಪಂಗಡ).—೪ ಗಂಟೆಯೊಳಗೆ ತೆಗೆದುಕೊಂಡರೂ ಅದನ್ನು ಕುಡಿಯದೆ ಮನೆಗೆ ತೆಗೆದುಕೊಂಡು ಹೋಗಿ ಮೂರು ಗಂಟೆಯ ಮೇಲೆ ಕುಡಿದರೆ ಏನು ಮಾಡುತ್ತೀರಿ? ಅದು ಹೇಗೆ ಗೊತ್ತಾಗುತ್ತದೆ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ಅದನ್ನು ನೋಡಿಕೊಳ್ಳುವುದಕ್ಕೆ ಸಿಬ್ಬಂದಿಯಿದೆ. ಮನೆಗೆ ತೆಗೆದುಕೊಂಡು ಹೋಗುವುದಕ್ಕೆ ಅವಕಾಶ ಕೊಡುವುದಿಲ್ಲ.

Mr. SPEAKER.—Short Notice Question No. 31, Sri W. H. Hanumanthappa.

Implementing the Recommendations of the Kasturbhai Lalbhai Committee.

Q.—31. **Sri W. H. HANUMANTHAPPA** (Bangalore District—General).—

Will the Government be pleased to state:—

(*a*) Whether they have put any of the recommendations of the Kasturbhai Lalbhai Committee into execution;

(*b*) Whether any non-official bodies or individuals tendered evidence before that Committee;

(*c*) Whether the Government will make available the full report of the Committee to Members?

A.—**The Hon'ble Sri H. C. DASAPPA** (Minister for Finance and Industries).—

(*a*) The recommendations have been received and are being examined in detail in consultation with the heads of the respective concerns.

(*b*) In respect of State-aided and private concerns non-official gentlemen connected with the managements, it is learnt, have had discussions with Sri Kasturbhai Lalbhai.

(*c*) Tht report is confidential. Press Note containing the main comments and the recommendations made by Sri Kasturbhai Lalbhai in his report has been published in the *Gazette*, dated 24th May 1951. A copy of it is also placed on the table.*

ಶ್ರೀ ಡಬ್ಲ್ಯು. ಎಚ್. ಹನುಮಂತಪ್ಪನವರು.—ಕಸ್ತೂರಿಭಾಯ್ ಲಾಲ್‌ಭಾಯ್ ಅವರ ವರದಿ ಕಾರ್ಪೊರೇಷಿಯಲ್ ಎಂಬುದಾಗಿ ಜವಾಬನಲ್ಲಿ ಇದೆ. ತಮ್ಮ ಗೆಜೆಟ್ ನೋಟಿಫಿಕೇಷನ್ ಪ್ರಕಾರ ಕೆಲವು ಕಾರ್ಯಗಳನ್ನು ಕೈಕೊಂಡಿದೆ ಎಂದು ತಿಳಿಸಿದ್ದೀರಿ. ಆದ್ದರಿಂದ ಆ ವರದಿಯನ್ನು ಈ ಸಭೆಯ ಮುಂದೆ ಇಡುವುದಕ್ಕೆ ಸಾಧ್ಯವೇ?

ಮಾನ್ಯ ಶ್ರೀ ಎಚ್. ಸಿ. ದಾನಪ್ಪನವರು.—ಆ ವರದಿಯ ಒಂದು summary extract publish ಆಗಿದೆ. ಆದರೆ ವರದಿ ಇನ್ನೂ ಪೂರ್ತಿಯಾಗಿ publish ಆಗಿಲ್ಲ. ಅದಕ್ಕೆ ಅನುಮತಿ ದೊರೆತಿಲ್ಲ. ಅದರ ಒಂದು summary ತಯಾರುಮಾಡಿ ಕೇಂದ್ರ ಸರ್ಕಾರದವರ ಅನುಮತಿ ಪಡೆದು ಅದನ್ನು ಪಬ್ಲಿಷ್ ಮಾಡಲಾಗಿದೆ.

ಶ್ರೀ ಡಬ್ಲ್ಯು. ಎಚ್. ಹನುಮಂತಪ್ಪನವರು.—ಇದಲ್ಲದೆ ಬಾಕೀದು ಯಾವಾಗ ಪಬ್ಲಿಷ್ ಮಾಡಿ ಈ ಸಭೆಯ ಮುಂದೆ ಆ ವರದಿಯನ್ನು ಇಡುವುದಕ್ಕೆ ಸಾಧ್ಯ?

The Hon'ble Sri H. C. DASAPPA.—It is a report for the Central Government.

ಅವರನ್ನು ನಾವು ನೇಮಕಮಾಡಿ, ಅವರು ನಮಗೆ ವರದಿಮಾಡಿರುವುದು ಅಲ್ಲ. ಆದ್ದರಿಂದ ಕೇಂದ್ರ ಸರ್ಕಾರದವರ ಅನುಮತಿ ಬೇಕು.

ಶ್ರೀ ಡಬ್ಲ್ಯು. ಎಚ್. ಹನುಮಂತಪ್ಪನವರು.—ಹಾಗಾದರೆ ಆ ವರದಿ ನಮಗೆ ಯಾವಾಗ ದೊರೆಯಬಹುದು?

ಮಾನ್ಯ ಶ್ರೀ ಎಚ್. ಸಿ. ದಾನಪ್ಪನವರು.—ಅವರು ಯಾವಾಗ ಅನುಮತಿಕೊಟ್ಟರೆ ಆಗ ತಮಗೆ ಕೊಡಲಾಗುತ್ತದೆ.

ಶ್ರೀ ಎಚ್. ಕೆ. ವೀರಣ್ಣಗೌಡರು (ಮಂಡ್ಯ ಜಿಲ್ಲೆ).—Summary publish ಮಾಡಿರುವುದು ಅವರ ವರದಿಯಲ್ಲರತಕ್ಕ ಅಂಶಗಳಿಗೆ ಅನುಗುಣವಾಗಿ ತಾನೆ?

ಮಾನ್ಯ ಶ್ರೀ ಎಚ್. ಸಿ. ದಾನಪ್ಪನವರು.—ಹೌದು.

ಶ್ರೀ ಎಚ್. ಕೆ. ವೀರಣ್ಣಗೌಡರು.—ಹಾಗಾದರೆ ಅದರಲ್ಲಿರತಕ್ಕ ಕಾರ್ಪೊರೇಷಿಯಲ್ ಏನು?

ಮಾನ್ಯ ಶ್ರೀ ಎಚ್. ಸಿ. ದಾನಪ್ಪನವರು.—Facts and figures, profit and loss ಇವೆಲ್ಲಾ include ಮಾಡಿಲ್ಲ. ಅವರ ವರದಿ ಸ್ವಲ್ಪ ದೊಡ್ಡದಾಗಿದೆ. ಒಂದೊಂದು ಕಂಪನಿಗೂ ಬ್ಯಾಲೆನ್ಸ್‌ಷೀಟ್ Work-up ಮಾಡಿದ್ದಾರೆ. ಆ ವಿಷಯ ಕೊಟ್ಟಿಲ್ಲ.

ಶ್ರೀ ಎಚ್. ಕೆ. ವೀರಣ್ಣಗೌಡರು.—Summary ಒಳಗೆ, ವರದಿಯಲ್ಲ ಏನುಮಾಡಬೇಕೆಂದು ಸೂಚನೆ ಮಾಡಿದ್ದಾರೋ, ಅದನ್ನು ಕೊಟ್ಟಿದ್ದೀರಾ?

The Hon'ble Sri H. C. DASAPPA.—The summary contains only general recommendations.

Mr. SPEAKER.—Short Notice question No 30. Sri W. H. Hanumanthappa.

* Copy placed in the Assembly library.